# <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ.**954/*2022*** ಪಿ.ಡಬ್ಲೂ .1

ದಿನಾಂಕಃ 09-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ಹೆಚ್. ಎಂವಕೀಲರಿಂದಃ-

ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ದಾವೆ ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ನನ್ನ ತಾತನ ಹೆಸರು ರಾಮಯ್ಯ. ಅವರಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದರೆ ಯಾರು ಇಲ್ಲ. ಸದರಿ ರಾಮಯ್ಯ ನವರಿಗೆ ದಾವಾ ಆಸ್ತಿಗಳಲ್ಲದೆ ಎಷ್ಟು ಆಸ್ತಿಗಳಿದ್ದವು ಎಂದು ನೆನಪಿಲ್ಲ. ವಾದಿಯರಾದ ನಾವು ಬಿಸನಹಳ್ಳಿ ಗ್ರಾಮ ಬಿಟ್ಟು ಸುಮಾರು 7-8 ವರ್ಷ ಆಗಿರಬಹುದು. ನಾವು ವರ್ತೂರು ಗ್ರಾಮದ ಮಧುರ ಗ್ರಾಮದಲ್ಲಿ ವಾಸ ಇದ್ದೆವು. ನಾವು ಹೂಡಿ ಗ್ರಾಮದಲ್ಲಿ ಸುಮಾರು 1 ವರ್ಷ ವಾಸ ಇರಬಹುದು. ನಾವು 1999-2000 ಸಾಲಿನಲ್ಲಿಯೇ ಬಿಸನಹಳ್ಳಿ ಗ್ರಾಮ ತೊರೆದು ಹೂಡಿ ಗ್ರಾಮಕ್ಕೆ ತೆರಳಿರುತ್ತೇವೆ ಎಂದರೆ ಸರಿಯಲ್ಲ. ಕೆಲಸದ ನಿಮಿತ್ತ ಹೋಗಿದ್ದು ಹಾಗಾಗಿ ಬಿಸನಹಳ್ಳಿ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಿದ್ದೇವು. ಆ ರೀತಿ ಗ್ರಾಮಕ್ಕೆ ಏನು ವಿಚಾರಕ್ಕಾಗಿ ಬಂದದಿ ಹೋಗುತ್ತಿದ್ದೀರಿ ಎಂದರೆ ನಮ್ಮ ತಂದೆಯನ್ನು ನೋಡಿಕೊಂಡು ಹೋಗಲು ಬರುತ್ತಿದ್ದೇವು. ನಮ್ಮ ತಂದೆ- ತಾಯಿಯೊಂದಿಗೆ ಅವರ ಮರಣ ಹೊಂದುವವರೆಗೂ ವಾಸ ಇದ್ದೇವು. ನಮ್ಮ ತಾಯಿ 2021 ರಲ್ಲಿ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದುವವರೆಗೂ ಬಿಳಸನಹಳ್ಳಿಯಲ್ಲಿ ವಾಸ ಇರಲಿಲ್ಲ. ನಮ್ಮ ತಂದೆಯ ಮರಣ ನಂತರ ನಮ್ಮ ಜೊತೆ ವಾಸ ಇದ್ದು ಸ್ವಲ್ಪ ದಿನ ಬಿಸನಹಳ್ಳಿಯಲ್ಲಿ ವಾಸ ಇರುತ್ತಿದ್ದರು. ನಮ್ಮ ತಂದೆ 2016 ರಲ್ಲಿ ಮರಣ ಹೊಂದಿರುತ್ತಾರೆ. 2000 ನೇ ಸಾಲಿನಿಂದಲೂ ನಾವು ನಮ್ಮ ತಂದೆಯನ್ನು ಬಿಳಸನಹಳ್ಳಿಯಲ್ಲಿಯೇ ಬಿಟ್ಟು ತಾಯಿಯೊಂದಿಗೆ ಹೂಡಿ ಗ್ರಾಮದಲ್ಲಿ ವಾಸ ಇದ್ದೇವು ಎಂದರೆ ಸುಳ್ಳು. ನಮ್ಮ ತಂದೆ ತಮ್ಮ ದುಷ್ಚಟಗಳಿಗಾಗಿ 2000 ಸಾಲಿನ ಹಿಂದೆಯೇ ತನ್ನ ಭಾಗಕ್ಕೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದರು ಆ ಕಾರಣದಿಂದಲೇ ನಮ್ಮ ತಾಯಿ ನಮ್ಮನ್ನು ಕರೆದುಕೊಂಡು ಹೊಡಿ ಗ್ರಾಮಕ್ಕೆ ಹೋಗಿರುತ್ತಾರೆ ಎಂದರೇ ಸುಳ್ಳು.

ನಮ್ಮ ತಾತನಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂಬುದರ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳ ಬಗ್ಗೆ ನೆನಪಿಲ್ಲ. ನನ್ನ ತಾತ ರಾಮಯ್ಯ ನವರ ಮೊದಲನೇ

ಹೆಂಡತಿಗೆ 5 ಜನ ಮಕ್ಕಳು. 2 ನೇ ಹೆಂಡತಿಗೆ ಇಬ್ಬರು ಮಕ್ಕಳು. ನಿಪಿ. 1 ರ ವಂಶ ವೃಕ್ಷವನ್ನು ತಹಶೀಲ್ದಾರರಿಂದ ದೃಡೀಕರಿಸಿ ಹಾಜರು ಮಾಡಲು ತೊಂದರೆ ಇರಲಿಲ್ಲ. ನಿಪಿ. 1 ರಲ್ಲಿ ರಾಮಯ್ಯ ನವರ 2 ನೇ ಹೆಂಡತಿಯ ಮಕ್ಕಳ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ರಾಮಯ್ಯ ನವರ 2 ನೇ ಹೆಂಡತಿಯ ಮಕ್ಕಳು ತುಂಬಾ ವರ್ಷಗಳ ಹಿಂದೆಯೇ ಭಾಗ ತೆಗೆದುಕೊಂಡು ಹೋಗಿರುವ ಕಾರಣ ಅವರ ಹೆಸರುಗಳನ್ನು ಸೇರಿಸಿರುವುದಿಲ್ಲ.ನನ್ನ ವಾದ ಪತ್ರದಲ್ಲಿ ನನ್ನ ತಂದೆಯ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಭಾಗ ಆಗಿದೆ ಎಂದು ಯಾವಾಗ ಆಗಿರುತ್ತದೆ ಎಂದು ನೆನಪಿಲ್ಲ. ಸದರಿ ವಿಭಾಗ ಯಾವಾಗ, ಯಾವ ರೀತಿ ಆಗಿರುತ್ತದೆ ಎಂದು ಸಾಕ್ಷಿ ಆ ರೀತಿ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ರಾಮಯ್ಯನ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆಂದು ಹೇಳಿದ್ದು ಯಾವಾಗ ಎಂದರೆ ಗೋಪಾಲಪ್ಪನವರು ಮತ್ತು ಚೆನ್ನಸ್ವಾಮಪ್ಪನವರು ತುಂಬಾ ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡು ಹೋಗಿರುತ್ತಾರೆ.

ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮತ್ತು ಪ್ರತಿವಾದಿ ಒಟ್ಟಾಗಿರುತ್ತಾರೆಂದು ಹೇಳಿದ್ದು ಆ ಬಗ್ಗೆ ದಾಖಲೆ ಇಲ್ಲ. ರಾಮಯ್ಯನವರು 4 ಜನ ಮಕ್ಕಳು ಒಟ್ಟಾಗಿ ವಿಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿ ಒಟ್ಟಾಗಿ ವಿಭಾಗ ಮಾಡಿಕೊಂಡಿದ್ದು ನನ್ನ ತಂದೆಗೆ ಬಂದ ಆಸ್ತಿಗಳನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು.

ನನ್ನ ತಂದೆ 1976-77 ರ ಸಾಲಿನಲ್ಲಿಯೇ ಸರ್ವೆ ನಂ. 83/1 ರಲ್ಲಿ 27 ಗುಂಟೆ ಜಮೀನನ್ನು ಮಾರಾಟ ಮಾಡಿರುವ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ದಾಖಲೆಯನ್ನು ನನ್ನ ತಂದೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ. 1 ಎಂದು ಗುರುತಿಸಲಾಯಿತು. ನಾವು 2000 ಸಾಲಿನಲ್ಲಿ ಹೂಡಿ ಗ್ರಾಮಕ್ಕೆ ಹೋದ ನಂತರ ಬಿಸನಹಳ್ಳಿ ಗ್ರಾಮದಲ್ಲಿ ನಮ್ಮ ತಂದಗೆ ಸೇರಿದ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿ ನಮ್ಮ ತಂದೆ ವಾಸ ಇದ್ದರು ಎಂದರೆ ಹೌದು. ಸದರಿ ಮನೆಯನ್ನು ಹೊರತುಪಡಿಸಿ ನಮ್ಮ ತಂದೆಗೆ ಬೇರೆ ಯಾವುದೇ ಮನೆ ಅಥವಾ ನಿವೇಶನಗಳು ಬಂದಿಲ್ಲ. ಈಗ ನೋಡುತ್ತಿರುವ ದಾಖಲೆಯಂತೆ ನನ್ನ ತಂದೆ ಚೆನ್ನಪ್ಪ ಬಿನ್ ಮುನಿಶ್ಯಾಮಪ್ಪನವರಿಗೆ ಕ್ರಯ ಎಂದು ಬರೆದಿದೆ ಎಂದರೆ ಸರಿ.

ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ. 2 ಎಂದು ಗುರುತಿಸಲಾಯಿತು. ಅದೇ ರೀತಿ ನನ್ನ ತಂದಯ ಭಾಗಕ್ಕೆ 30x34 ಅಡಿ ನಿವೇಶನ ಇತ್ತು ಎಂದರೆ ಗೊತ್ತು. ಸದರಿ ನಿವೇಶನ ನಿಡಿ. 2 ರ ಮನೆಯ

ಪಕ್ಕದಲ್ಲಿ ಇದೆ ಎಂದರೆ ಹೌದು ಒಟ್ಟು ಕುಟುಂಬದ ನಿವೇಶನ ಆಗಿರುತ್ತದೆ. ಸದರಿ ನಿವೇಶನವನ್ನು ಸಹ ನನ್ನ ತಂದೆಯವರು ಈಶ್ವರ್ ಸಿಂಗ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಗೆ ಆಸ್ತಿಯಲ್ಲಿ ಭಾಗದ ಮೂಲಕ ಬಂದಿರುವ ವಿಚಾರ ಗೊತ್ತಿದ್ದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಐಟಂ ನಂ. 1 ರ ಅಸ್ತಿ ನಿಪಿ. 6 ರಂತೆ ರಾಮಯ್ಯ ಬಿನ್ ಮುನಿರಾಜುರವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ನಮ್ಮ ತಾತನವರ ಕಟುಂಬಕ್ಕೆ ಸೇರಿರುತ್ತದೆ ಎಂಬುದರ ಬಗ್ಗೆ ಪಹಣಿ ಹಾಜರು ಮಾಡಿದ್ದೇನೆ. ಸದರಿ ಎಲ್ಲಾ ವಿವಾರಗಳ ನನಗೆ ಗೊತ್ತಿದ್ದರು ಸಹ ಪ್ರತಿವಾದಿ ಮತ್ತು ರಾಮಯ್ಯನವರ ಕುಟುಂಬಕ್ಕೆ ಸಂಬಂಧ ಪಡದ ಐಟಂ ನಂ. 1 ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸುಳ್ಳು.

ನನ್ನ ಪರ ವಕೀಲರು ನಮ್ಮ ಗ್ರಾಮದವರೆ ಎಂದರೆ ಹೌದು. ನಮಗೆ ನಮ್ಮ ತಂದೆ ಮತ್ತು ತಾತನ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸುಳ್ಳು. ಆ ಕಾರಣದಿಂದಲೇ ಬೇರೆಯವರ ಪಹಣಿಗಳನ್ನು ಹಾಜರು ಮಾಡಿರುತ್ತೇನೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.